ಶ್ರೀ ಕೆ.ಜೆ. ಜಾರ್ಜ್ : ಮತ್ತಿಕೆರೆಯಲ್ಲಿ ಗೃಹ ನಿರ್ಮಾಣ ಮಂಡಳಿಯವರು ಒಟ್ಟು ಆರು ಮನೆಗಳನ್ನು ನಿರ್ಮಿಸಿದ್ದಾರೆ. 1983ರಲ್ಲಿ ಅದನ್ನು ಪಿಡಬ್ಲ್ಯುಡಿ ಯವರಿಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ಆದುದರಿಂದ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಮಂಡಳಿಯವರು ಬಿಡಿಸಿ ವಶಕ್ಕೆ ತೆಗೆದುಕೊಳ್ಳುತ್ತಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ದಯವಿಟ್ಟು ಪಿಡಬ್ಲ್ಯುಡಿಯವರನ್ನು ವಿಚಾರಿಸಿದರೆ ಅವರಿಗೆ ಸಮರ್ಪಕವಾದ ಉತ್ತರವು ಸಿಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ನಾನು ಪಿಡಬ್ಲ್ಯುಡಿಯವರೊಡನೆಯೂ ಕೂಡ ಪತ್ರ ವ್ಯವಹಾರ ಮಾಡಿದ್ದೇನೆ. ಅವರು ಈ ಮನೆಗಳು ನಮಗೆ ಸೇರಿದ್ದಲ್ಲ ಎಂದು ಹೇಳುತ್ತಿದ್ದಾರೆ. ವಿದ್ಯಾಇಲಾಖೆಯವರು ಕೂಡ ಈ ಮನೆಗಳು ನಮಗೆ ಸೇರಿಲ್ಲ ಎಂದು ಹೇಳುತ್ತಿದ್ದಾರೆ. ಸರಕಾರದ ವತಿಯಿಂದ ಹಣವನ್ನು ಖರ್ಚು ಮಾಡಿ ಕಟ್ಟಿಸಿದ ಮನೆಗಳು ಈ ರೀತಿ ಯಾರಿಗೂ ಸೇರದೆ ಇದ್ದು.....

ಅಧ್ಯಕ್ಷರು : ಯಾರಿಗೂ ಸೇರದಿದ್ದರೆ ಅದರಲ್ಲಿ ಯಾರಾದರೂ ಇರಲಿ ಬಿಡಿ.

ಶ್ರೀ ಹೆಚ್.ಎಂ. ರೇವಣ್ಣ : ಸರಕಾರದ ಹಣದಿಂದ ಖರ್ಚು ಮಾಡಿ ಕಟ್ಟಿದ ಮನೆಗಳನ್ನು ಸರಿಯಾದ ರೀತಿಯಲ್ಲಿ ವಿತರಿಸದೆ ಬೇಜವಾಬ್ದಾರಿತನವನ್ನು ಅಧಿಕಾರಿಗಳು ತೋರಿದರೆ ಹೇಗೆ? ನಾನು ಪಿಡಬ್ಲ್ಯುಡಿ ಯವರನ್ನು ಮತ್ತು ವಿದ್ಯಾ ಇಲಾಖೆಯವರನ್ನು ವಿಚಾರಿಸಿದ್ದೇನೆ.

ಅಧ್ಯಕ್ಷರು : ಪಿಡಿಬ್ಲ್ಯುಡಿಯವರು ಏನು ಹೇಳುತ್ತಾರೆ?

ಶ್ರೀ ಹೆಚ್.ಎಂ. ರೇವಣ್ಣ : ಅವರು ನಮಗೆ ಹೌಸಿಂಗ್ ಬೋರ್ಡಿನಿಂದ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಆ ಮನೆಗಳಲ್ಲಿ ಕೆಲವು ಮೇಸ್ತ್ರಿಗಳು ಹೋಗಿ ಕೊಂಡು ಹೊಡೆದಾಡುತ್ತಿದ್ದಾರೆ. ಬಲಾಢ್ಯ ಮೇಸ್ತ್ರಿರುಗಳು ಪಾತ್ರೆಗಳನ್ನೆಲ್ಲಾ ಹೊರಗೆ ಹಾಕಿ ಮನೆಯೊಳಗೆ ಸೇರಿಕೊಂಡಿದ್ದಾರೆ.

ಅಧ್ಯಕ್ಷರು : ತಾವೂ ಬಲಾಢ್ಯರಿದ್ದೀರಿ, ಮೇಸ್ತ್ರಿರುಗಳನ್ನು ಸೆಟಲ್ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಸ್ವಲ್ಪ ಹೊತ್ತು ಹೊರಗೆ ಹೋಗಿ ಬರುವ ಅವಶ್ಯಕತೆ ಇದ್ದುದರಿಂದ ನನ್ನ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳುವ ಬಗ್ಗೆ ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಆಯಿತು, ತೆಗೆದುಕೊಳ್ಳೋಣ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹಿಸಿದ ಮೊತ್ತ

2109 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ಉಳಿತಾಯ ಮತ್ತು ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1987-88,1988-89,1989-90, 1990-91 ರಲ್ಲಿ ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹವಾದ ಹಣವೆಷ್ಟು? (ವರ್ಷವಾರು ವಿವರಬೇಕು)*
2. *ಸಣ್ಣ ಉಳಿತಾಯದಲ್ಲಿ ದಕ್ಷಿಣ ಕನ್ನಡ ಯಾವ ಸ್ಥಾನದಲ್ಲಿದೆ.*
3. *ಮುಂದಕ್ಕೆ ಇನ್ನೂ ಪ್ರಗತಿಯಾಗಲು ಹೊಸ ಹೊಸ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆಯೇ? ಹಾಗಿದ್ದಲ್ಲಿ ಅವು ಯಾವುವು?*

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ ಮತ್ತು ರಾಜ್ಯ ವಿಮಾ ಮಂತ್ರಿಗಳು) :

1) ದಕ್ಷಿಣ ಕನ್ನಡ ಜಿಲ್ಲೆ

ವರ್ಷ	ಗುರಿ (ಲಕ್ಷಗಳಲ್ಲಿ)		ಸಂಗ್ರಹಣೆ		ಶೇಕಡವಾರು ನಿವ್ವಳ ಸಂಗ್ರಹಣೆ
	ಒಟ್ಟು	ನಿವ್ವಳ	ಒಟ್ಟು	ನಿವ್ವಳ	
1987-88	4700	2800	4028.18	2081.18	74.33
1988-89	5600	2800	6067.99	3202.10	114.36
1989-90	5600	2800	6352.51	2854.25	101.94
1990-91	5600	2800	7037.14	1872.72	66.88

2. 1991-92ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜುಲೈ ತಿಂಗಳ ಅಂತ್ಯದವರೆಗೆ ಆದ ಸಂಗ್ರಹಣೆ ಪ್ರಕಾರ ಈ ಜಿಲ್ಲೆಯು 10ನೇ ಸ್ಥಾನದಲ್ಲಿರುವುದು.

3. 1990-91ನೇ ಸಾಲಿನಲ್ಲಿ ರಾಜ್ಯಕ್ಕೆ ನಿಗದಿಪಡಿಸಿದ ಗುರಿಯನ್ನು ಸಾಧಿಸಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅವುಗಳ ವಿವರಗಳು ಕೆಳಕಂಡಂತಿದೆ.

1. ಸಣ್ಣ ಉಳಿತಾಯದ ವಿವಿಧ ವಿನಿಯೋಗಗಳ ಬಹುಮಾನ ಯೋಜನೆ.

2. ಅಧಿಕೃತ ಏಜಂಟರುಗಳ ಸ್ಪರ್ಧಾ ಯೋಜನೆ.

3. ಸಂಘ ಸಂಸ್ಥೆಗಳು ಕಿಸಾನ ವಿಕಾಸ ಪತ್ರ, ರಾಷ್ಟ್ರೀಯ ಉಳಿತಾಯ ಪತ್ರಗಳಲ್ಲಿ ತೊಡಗಿಸಿದ ಹಣಕ್ಕೆ ಶೇ.1 ರಂತೆ ಪ್ರೋತ್ಸಾಹಕ ಧನ ನೀಡುವ ಯೋಜನೆ.

4. ಸಂಘ ಸಂಸ್ಥೆಗಳು ಏಜೆನ್ಸಿ ಪಡೆದು ಅದರ ಮೂಲಕ ಸಂಗ್ರಹಿಸಿದ ಹಣಕ್ಕೆ ಪ್ರೋತ್ಸಾಹ ಹಣ ನೀಡುವ ಯೋಜನೆ.

5. ಸಮೂಹದ ಮುಖಂಡರುಗಳಿಗೆ ಪ್ರೋತ್ಸಾಹಕ ಧನ ನೀಡುವ ಯೋಜನೆ.

6. ಅಧಿಕೃತ ಏಜಂಟರುಗಳು ಸಂಗ್ರಹಿಸಿದ ಹಣಕ್ಕೆ ಸಂಗ್ರಹಣಾನುಸಾರ ಪ್ರೋತ್ಸಾಹಕ ಬಹುಮಾನ ನೀಡುವ ಯೋಜನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೆ, 1988-89, 1989-90 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಸಣ್ಣ ಉಳಿತಾಯದಲ್ಲಿ ಮೊದಲನೇ ಸ್ಥಾನದಲ್ಲಿತ್ತು, ತುಟ್ಟ ತುದಿಯಲ್ಲಿತ್ತು. ಈಗ ಆ ಜಿಲ್ಲೆಯು 1990-91ರಲ್ಲಿ ಭಾರಿ ಕುಸಿತವಾಗಲು ಕಾರಣ ಏನು? ಅವೊತ್ತು 114.36, 101.94 ಇದ್ದುದು ಇವೊತ್ತು 66.88ಕ್ಕೆ ಬಂದಿದೆ. ಹೀಗೆ ಭಾರಿ ಕೆಳಕ್ಕೆ ಇಳಿಯಲು ಕಾರಣ ಏನು?

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಗೊತ್ತಿರುವ ಹಾಗೆ, ನಮ್ಮ ಸಂಗ್ರಹಣೆಯು 70ಕೋಟಿ, 37ಲಕ್ಷಕ್ಕೆ ಬಂದಿದೆ. ಈ ಸಾರಿ ವಿತ್‌ಡ್ರಾಯಲ್ಸ್ ತುಂಬಾ ಜಾಸ್ತಿಯಾಗಿದೆ. ಮೆಚ್ಯುರಿಟಿ ಆಗಿರತಕ್ಕಂಥ ಮತ್ತು ಹಣವನ್ನು ವಾಪಸ್ ಪಡೆಯುತಕ್ಕಂಥವರ ಸಂಖ್ಯೆಯು ಜಾಸ್ತಿಯಾಗಿರುವುದರಿಂದ ಬಹುಶಃ ಅಲ್ಲಿ ಉಳಿತಾಯವು ಕುಸಿದಿದೆಯೇ ವಿನಃ ಇದನ್ನು ಬಿಟ್ಟರೆ ಬೇರೆ ಯಾವ ಕಾರಣವೂ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯು 66 ಪರ್‌ಸೆಂಟ್‌ನಷ್ಟು ಇದ್ದು ಅದು ಹತ್ತನೆಯ ಸ್ಥಾನದಲ್ಲಿದೆ.

ಶ್ರೀ ಬಿ.ಎಂ. ಇದಿನಬ್ಬ : 1990-91 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು 10ನೇ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ. ನಿಜವಾಗಿಯೂ ದಕ್ಷಿಣ ಕನ್ನಡ ಸಣ್ಣ ಉಳಿತಾಯದಲ್ಲಿ ಮೊದಲಿನಿಂದಲೂ ಬಹಳ ಮುಂದೆ ಇರತಕ್ಕಂಥ ಜಿಲ್ಲೆ. ಅದು ಯಾವಾಗಲೂ ಪ್ರಥಮ ಅಥವಾ ದ್ವಿತೀಯ ಸ್ಥಾನದಲ್ಲಿರುವಂಥ ಜಿಲ್ಲೆ. ಆದರೆ ಈಗ ಹತ್ತನೇ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಉಳಿತಾಯದ ಪ್ರಚಾರ ನಿಜವಾಗಿಯೂ ಬಹಳ ಕೆಳಮಟ್ಟದಲ್ಲಿ ಇದೆ ಎನ್ನುವುದು ನನ್ನ ಭಾವನೆಯಾಗಿದೆ. ಆದುದರಿಂದ ಇದನ್ನು ಅತ್ಯಂತ ಜೋರಾಗಿ,ತುತ್ತ ತುದಿಗೆ ಏರಿಸಲು ಹೆಚ್ಚು ಪ್ರಗತಿ ಕಾಣುವಂತೆ ಮಾಡಲು ಸೂಕ್ತ ವ್ಯವಸ್ತೆ ಮತ್ತು ಆದೇಶವನ್ನು ನೀಡುತ್ತೀರಾ?

ಶ್ರೀ ಟಿ.ಎಂ. ಮಂಜುನಾಥ್ : ಈ ಸಣ್ಣ ಉಳಿತಾಯದ ಬಗ್ಗೆ ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ರಿವ್ಯೂ ಮಾಡಿ ಈ ಕಾರ್ಯಕ್ರಮವನ್ನು ಚುರುಕಾಗಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ ಅಲ್ಲಿಗೆ ಹೋಗಿ ಈ ಕಾರ್ಯಕ್ರಮದ ಚಟುವಟಿಕೆಗಳೇನಾದರೂ ಕುಂದಿದ್ದರೆ ಅದನ್ನು ತ್ವರಿತವಾಗಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗುತ್ತೆ. ಮತ್ತು ಯಾವರೀತಿಯಲ್ಲಿ ಈ ಕಾರ್ಯಕ್ರಮವನ್ನು ಅನುಸರಿಸಬೇಕೆಂಬುದನ್ನು ನಾವು ಸೂಚಿಸಿದ್ದೇವೆ. ಯೂವುದನ್ನು ಪ್ರೋತ್ಸಾಹದಾಯಕವಾಗಿ ಕೊಡಬೇಕು ಏಜಂಟರನ್ನು ಯಾವರೀತಿಯಾಗಿ ಮಾಡಬೇಕು. ಇತ್ಯಾದಿ ಮುಖ್ಯ ವಿಚಾರಗಳ ಬಗ್ಗೆ ಸೂಚಿಸಿದೆ. ಅಲ್ಲಿ ಸಣ್ಣ ಉಳಿತಾಯದಲ್ಲಿ ಕುಸಿತವಾಗಲು ಮುಖ್ಯವಾದಂಥ ಕಾರಣವೇನೆಂದರೆ, ಅದನ್ನು ಒಟ್ಟಾರೆ ಹೇಳುವುದಾದರೆ, ನಮ್ಮ ರಿಸರ್ವ್ ಬ್ಯಾಂಕ್‌ನವರು ಎರಡು ಬಾರಿ ಈಗಾಗಲೇ ಬಡ್ಡಿ ದರವನ್ನು ಕೆಲವು ಬ್ಯಾಂಕ್‌ಗಳಲ್ಲಿ ಜಾಸ್ತಿ ಮಾಡಿದ್ದಾರೆ. ಆದರೆ ರಾಷ್ಟ್ರೀಯ ಸಣ್ಣ ಉಳಿತಾಯದ ಬಗ್ಗೆ ಇದುವರೆಗೂ ಬಡ್ಡಿಯನ್ನು ಹೆಚ್ಚಿಗೆ ಮಾಡದಿರುವುದರಿಂದ ಡಿಪಾಸಿಟ್ ಕಡಿಮೆ ಆಗಿರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಕಿಂಗ್ ಸಿಸ್ಟಂ ಜಾಸ್ತಿ ಇರುವುದರಿಂದ ಈ ಕೊರತೆಯು ಆಗಿರಬಹುದು. ಮಾನ್ಯ ಮುಖ್ಯಮಂತ್ರಿಯವರು ಈ ಬಡ್ಡಿ ದರದ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರಕಾರದವರಿಗೆ ಪತ್ರ ಬರೆದು ಸೂಚಿಸಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಅವರು ತೆಗೆದುಕೊಂಡರೆ ಸಣ್ಣ ಉಳಿತಾಯದಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ ಅಧಿಕಾರಿಗಳು ಹಾಗೂ ನೌಕರರು

2269- ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ಮಾರ್ಚ್ ಮಾಹೆಯ ಅಂತ್ಯದವರೆಗೆ ಸರ್ಕಾರದ ನಾನಾ ಇಲಾಖೆಗಳಲ್ಲಿ 'ಎ','ಬಿ','ಸಿ'ಹಾಗೂ 'ಡಿ' ಗುಂಪಿನಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಧಿಕಾರಿಗಳ ನೌಕರರ ಸಂಖ್ಯೆಯೆಷ್ಟು?

ಆ) ಶೇಕಡವಾರಿನಲ್ಲಿ ಮೇಲ್ಕಂಡ ಜಾತಿಗಳ : ವರ್ಗಗಳ ಜನರ ಸಂಖ್ಯೆ ಕಡಿಮೆಯಿದ್ದಲ್ಲಿ ಆ ಹುದ್ದೆಗಳನ್ನು ಯಾವ ರೀತಿ ಭರ್ತಿಮಾಡಲಾಗುವುದು.

ಇ) ಈ ಕೊರತೆಯನ್ನು ಭರ್ತಿ ಮಾಡಲು ತೊಂದರೆಯೋನಾದರೂ ಇದ್ದಲ್ಲಿ ಅದನ್ನು ಸರಿಪಡಿಸಲು ಕಾನೂನಿನ ಮೂಲಕ ತಿದ್ದುಪಡಿ ತಂದು ಪರಿಶಿಷ್ಟ ಜಾತಿ : ವರ್ಗದ ಜನರಿಗೆ ನ್ಯಾಯವನ್ನು ದೊರಕಿಸಿ ಕೊಡಲಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :